ಆದರೆ, ಮತ್ತೆ ನೀನು ಲಂಡನ್ನಿಗೆ ಹಾರಿಬಿಟ್ಟೆ, ನಿನ್ನ ಅಮ್ಮನೊಂದಿಗೆ. ಐನೂರು ಎಕರೆಯಷ್ಟು ನಿಮ್ಮ ತೋಟ, ಅರಮನೆಯಂಥ ಮನೆ, ಆರೇಳು ಕಾಫಿ ಕ್ಯೂರಿಂಗ್ ಫ್ಯಾಕ್ಟರಿಗಳು, ನಿಮ್ಮ ಅಧೀನದಲ್ಲಿದ್ದ ದೊಡ್ಡ ಚರ್ಚ್, ಕೆಲಸಗಾರರ ಮಕ್ಕಳಿಗಾಗಿಯೇ ನೀವು ನಡೆಸುತ್ತಿದ್ದ ಆ ದೊಡ್ಡ ಸ್ಕೂಲು... ಖಂಡಿತವಾಗಿಯೂ ನಮಗೊಂದೂ ಅರ್ಥವಾಗುತ್ತಿರಲಿಲ್ಲ ಆಗ. ದೊರೆ ಮನೆಯವರೆಂದೇ ನಿಮ್ಮ ಮನೆಯವರನ್ನು ಕರೆಯುತ್ತಿದ್ದದ್ದು. ನಮ್ಮಪ್ಪ ಕಾಯಿಲೆ ಬಿದ್ದು ಸತ್ತ ನಂತರ ನಾನು ಅಮ್ಮನ ಜೊತೆಯಲ್ಲಿ ತಾತನ ಊರಿಗೆ ಹೋದೆ. ಅಲ್ಲಿಂದ ಹೋಗುವಾಗ ಅಮ್ಮ ಇನ್ನಿಲ್ಲದಷ್ಟು ಕಣ್ಣೀರು ಸುರಿಸಿದ್ದಳು. ಅವಳನ್ನು ನೋಡಿ ನಾನೂ ಅತ್ತಿದ್ದೆ. ಕಷ್ಟಪಟ್ಟು ಓದಿದೆ. ಅಕ್ಷರ ನನ್ನ ಕೈ ಹಿಡಿಯಿತು. ಈಗ ಈ ಸ್ಥಾನದಲ್ಲಿ ಇದ್ದೀನಿ. ವರ್ತಮಾನದ ಬೆಳಕಿನಲ್ಲಿ ಭೂತಕಾಲದ ನೆರಳು ಮಾಸಿಹೋಗುತ್ತದೆ'' ಎಂದು ನಾನು ಮಾತನಾಡುವುದನ್ನು ನಿಲ್ಲಿಸಿದಾಗ ಅವನ ಮುಖದಲ್ಲಿ ಶುಷ್ಕ ನಗೆ ಮೂಡಿತ್ತು. ''ನೋಡು, ಇವೊತ್ತು ಒಬ್ಬನೇ ಸಿಕ್ಕಿದ್ದೀನಿ, ಅದೂ ನಿನ್ನ ಸಾಮ್ರಾಜ್ಯದಲ್ಲಿ. ನಿನಗೆ ಮನಸ್ಸಿಗೆ ಬಂದಂತೆ ಮಾಡು. ಹೇಗೂ ನಿನಗೆ ಲೈಸೆನ್ಸ್ಡ್ ಪಿಸ್ತೂಲ್ ಇದೆಯಲ್ಲ ಮತ್ತು ಕಮ್ಯುನಲ್ ರಯಟ್ಸ್ ಬೇರೆ ಇದೆ ಮತ್ತು ನನ್ನದು ಕ್ರಿಶ್ಚಿಯನ್ ಹೆಸರು. ನನ್ನ ಹೆಣ ಉರುಳಿದರೂ ಕೇಳುವವರಿರುವುದಿಲ್ಲ... ಅಂದ ಹಾಗೆ ಜಸ್ಟ್ ನೆನಪಾಯ್ತು ನೋಡು, ಅದೇ ಚಿಲ್ಲರೆ ಅಂಗಡಿಯ ಬಿದ್ದಪ್ಪನಾಯ್ಕನ ಮಗಳು ಸುಮತಿ ಹೇಗಿದಾಳೆ? ಎಲ್ಲಿದಾಳೆ? ನಾವು ಏಳನೆಯ ಕ್ಲಾಸಿನಲ್ಲಿದ್ದರೆ ಅವಳು ಆರನೆಯ ತರಗತಿಯಲ್ಲಿ ಇದ್ದಳು. ಅವರಪ್ಪ ಹಾಸನದಿಂದ ಮಾರಲು ತರುತ್ತಿದ್ದ ಮಿಠಾಯಿ ಬಿಲ್ಲೆಗಳನ್ನು ಅವಳು ಅಂಗಡಿಯಿಂದ ಕದ್ದು ತನ್ನ ಬ್ಯಾಗಿನಲ್ಲಿಟ್ಟುಕೊಂಡು ಬಂದು ಯಾರಿಗೂ ಕಾಣದಂತೆ ನನಗೆ ಕೊಡುತ್ತಿದ್ದಳು. ಒಂದು ಮಳೆಗಾಲದ ದಿನ ಮನೆಯ ಹಿಂದಿನ ಕಾಫಿ ತೋಟದ ಪೊದೆಯ ಮರೆಯಲ್ಲಿ ಮಿಠಾಯಿ ತಂದುಕೊಟ್ಟಾಗ ಅವಳನ್ನು ಅಪ್ಪಿಕೊಂಡು ತುಟಿಗಳಿಗೆ ಮುತ್ತು ಕೊಟ್ಟಿದ್ದೆ. ಅವಳು ಕ್ಷಣ ಗಡಗಡ ನಡುಗುತ್ತಾ ನಿಂತವಳು ಕಡೆಗೆ ನನ್ನ ಕೆನ್ನೆಗೊಂದು ಜೋರಾಗಿ ಬಾರಿಸಿ ಓಡಿಹೋಗಿದ್ದಳು. ಅವಳ ಅಂದಿನ ಏಟಿನ ನೋವನ್ನು ಈಗಲೂ ಮರೆಯಲಾಗುತ್ತಿಲ್ಲ ನನಗೆ...'' ಎಂದು ತನ್ನ ಕೆನ್ನೆಯನ್ನು ತಾನೇ ಸವರಿಕೊಂಡಿದ್ದ.

ರಾತ್ರಿ ಹತ್ತು ಗಂಟೆಯಾಗುತ್ತಾ ಬಂದಿತ್ತು. ಕುಡಿಯುವುದನ್ನು ನಿಲ್ಲಿಸಿ ಊಟ ಮಾಡೋಣವೆನಿಸಿ ಕೇರ್ ಟೇಕರನ್ನು ಕರೆದಿದ್ದೆ. ವಾಶ್ ರೂಮಿಗೆ ಹೋಗಿ ಬಂದ ಡಿಕ್ಯಾಸ್ಟ್ರೊ ಮೆಲ್ಲಗೆ ಸೋಫಾದ ಮೇಲೆ ಕುಳಿತುಕೊಂಡು, ''ನೀನು ಬೇಗ ಮನೆಗೆ ಹೋಗಬೇಕಾದರೆ ಹೊರಡು. ನನಗೆ ಹನ್ನೆರಡು ಗಂಟೆಯವರೆಗೂ ನಿದ್ದೆ ಬರಲ್ಲ. ಇನ್ನೊಂದು ಸ್ಮಾಲ್ ತೆಗೆದುಕೊಂಡು, ನಿಧಾನಕ್ಕೆ ಊಟ ಮಾಡಿ ಮಲಗುತ್ತೇನೆ'' ಎಂದವನಿಗೆ, ''ಪರವಾಗಿಲ್ಲ ಇನ್ನೂ ಒಂದು ಗಂಟೆ ನಿನ್ನ ಜೊತೆ ಇರ್ತೀನಿ. ಪೊಲೀಸರಿಗೆ ರಾತ್ರಿ, ಹಗಲುಗಳ ನಡುವೆ ಅಂಥ ದೊಡ್ಡ ವ್ಯತ್ಯಾಸವೇನೂ ಇರುವುದಿಲ್ಲ. ಅದೂ ನೀನು ಇಲ್ಲಿ ಈ ರೀತಿ ಸಿಗುತ್ತೀಯೆಂದು ನಾನು ಕನಸು ಮನಸಿನಲ್ಲೂ ಊಹಿಸಿರಲಿಲ್ಲ'' ನಾನು ನಿಜವನ್ನೇ ಹೇಳಿದ್ದೆ. ಈ ಎಂಟು ದಿನಗಳಿಂದಲೂ ಟೆನ್ಶನ್‌ನಲ್ಲಿದ್ದ ನನ್ನ ದೇಹ, ಮನಸುಗಳೆರಡೂ ಒಂದು ರೀತಿಯ ಸಮಾಧಾನದ ಸ್ಥಾಯಿಗೆ ಬಂದು ನಿಂತಿದ್ದವು. ವಿಸ್ಕಿಯ ಗ್ಲಾಸನ್ನು ಬಾಯಿಗಿಟ್ಟುಕೊಂಡು ಕ್ಷಣ ಧ್ಯಾನಿಸಿದವನಂತೆ ಗುಟುಕನ್ನು ಗಂಟಲಿಗಿಳಿಸಿದವನು, ''ಅರೆ, ಸುಮತಿ ಬಗ್ಗೆ ನೀನು ಏನೂ ಹೇಳಲಿಲ್ಲ. ಯಾಕೆ ಕಾಂಟ್ಯಾಕ್ಟ್ ತಪ್ಪಿಹೋಗಿತ್ತಾ. ಎಲ್ಲಿರಬಹುದು ಅವಳು. ಅವಳು ಈಗ ಸಿಕ್ಕಿ ಹಿಂದಿನದನ್ನು ನೆನಪಿಸಿದರೆ ಇನ್ನೊಂದು ಕೆನ್ನೆಗೆ ಬಾರಿಸಿಬಿಡುತ್ತಾಳೋ ಏನೋ'' ಎಂದಿದ್ದ. ನಮ್ಮ ಮಾತುಗಳನ್ನು ಕೇಳಿಸಿಕೊಂಡ ಕೇರ್ ಟೇಕರ್ ಕಿಚನ್ ಕಡೆ ನಡೆದಿದ್ದ. ''ಸುಮತಿ ಎಂಟನೆಯ ಕ್ಲಾಸಿಗೆ ಚಿಕ್ಕಮಗಳೂರಿಗೆ ಹೋದಳಂತೆ. ಓದಿನಲ್ಲಿ ಇಡೀ ಸ್ಕೂಲಿಗೆ ಮುಂದಿದ್ದಳಂತೆ. ಹತ್ತನೆಯ ತರಗತಿಯಲ್ಲಿ ಜಿಲ್ಲೆಗೆ ಮೊದಲ ಸ್ಥಾನ ಪಡೆದವಳು ಡಾಕ್ಟರ್ ಓದಬೇಕೆಂದು ಪಿಯುಸಿಯಲ್ಲಿ ಸೈನ್ಸ್ ತಗೊಂಡಳು. ಎರಡನೆಯ ವರ್ಷ ಪಿಯುಸಿಯಲ್ಲಿರುವಾಗ ನಕ್ಸಲರ ಸಂಪರ್ಕ ಬಂದು ಓದುವುದನ್ನು ನಿಲ್ಲಿಸಿ ಅಂಡರ್ ಗ್ರೌಂಡ್ ಆದಳು. ಪೊಲೀಸರು ಬಿದ್ದೂನಾಯ್ಕನಿಗೆ ಹಿಂಸೆ ಕೊಡಲಾರಂಭಿಸಿದರು. ಒಂದು ದಿನ ರಾತ್ರಿ ಐದಾರು ಜನ ಸಂಗಡಿಗರೊಂದಿಗೆ ಸುಮತಿ ಮನೆಗೆ ಬಂದ ಸುದ್ದಿ ಇನ್ಫಾರ್ಮರ್ ಮೂಲಕ ತಿಳಿದ